ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿಸಿ ನಂ 143/2026

ಸಿ ಡಬ್ಲ್ಯೂಃ–10 /ಪಿ ಡಬ್ಲ್ಯೂ ಃ-05

ಸಾಕ್ಷಿದಾರರ ಹೆಸರು ಃ ಪ್ರಸನ್ನ ಹೆಚ್.ವಿ.
ತಂದೆಯ ಹೆಸರು ಃ ವಿಜಯ ಗೌಡ
ವಯಸ್ಸು ಃ 46 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸಸ್ಥಳ ಃ ಹಾತೂರು, ಎನ್.ಆರ್.ಪುರ ತಾಲೂಕು

ದಿನಾಂಕಃ 07-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಮೃತ ಕೃಷ್ಣಮೂರ್ತಿ ಇವರ ಪರಿಚಯ ಇರುತ್ತದೆ. ಆರೋಪಿಯನ್ನು ನೋಡಿರುತ್ತೇನೆ. ಚಾಸಾ-09 ರವರ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇರುವುದಿಲ್ಲ. ಹೀಗೆ 6 ತಿಂಗಳ ಹಿಂದೆ ಚಿಟ್ಟಿಕೊಡಿಗೆ ಗ್ರಾಮಕ್ಕೆ ಹೋಗಿ ಅಡಿಕೆ ಮರದಿಂದ ಅಡಿಕೆ ತೆಗೆದು ಸುಮಾರು 35 ಚೀಲ ಅಡಿಕೆಯನ್ನು ಧನುಷ್ ಇವರಿಗೆ ಸೇರಿದ ಸ್ವರಾಜ್ ಟ್ರಾಕ್ಟರ್ ನಲ್ಲಿ ಲೋಡ್ ಮಾಡಿ ನಾನು ಮತ್ತು ಇನ್ನೊಬ್ಬರು ಬೈಕ್ ನಲ್ಲಿ ಹೊರಟಿದ್ದು, ಆಗ ಕೃಷ್ಣ ಮೂರ್ತಿ ಇವರು ಟ್ರಾಕ್ಟರ್ ನ ಟ್ರೆಲರ್ ಮೇಲೆ ಕುಳಿತಿದ್ದು, ಎನ್.ಆರ್.ಪುರದ ಗುಡ್ಡಹಳ್ಳ ಕ್ರಾಸ್ ನಿಂದ ಸ್ವಲ್ಪ ಮುಂದೆ ರಸ್ತೆಯ ತಿರುವಿನಲ್ಲಿ ನಾಯಿ ಅಡ್ಡ ಬಂದಿದ್ದು, ಆಗ ಟ್ರಾಕ್ಟರ್ ಅನ್ನು ರಸ್ತೆಯ ಬಲಕ್ಕೆ ತಿರುಗಿಸಿದಾಗ ಟ್ರೆಲರ್ ಎಡಕ್ಕೆ ವಾಲಿ ಕೃಷ್ಣ ಮೂರ್ತಿ ಇವರು ಕೆಳಗೆ ಬಿದ್ದಿದ್ದು, ಅವರಿಗೆ ಗಾಯಗಳಾಗಿದ್ದು, ನಾನು ಮತ್ತು ಇನ್ನೊಬ್ಬರು ಅವರನ್ನು ಸರ್ಕಾರಿ ಆಸ್ಪತ್ರೆ ಕೊಪ್ಪಕ್ಕೆ ಸೇರಿಸಿ ಅಲ್ಲಿಂದ ಅವರನ್ನು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿದ್ದು, ನಂತರ ಅವರ ಶವವನ್ನು ಆಸ್ಪತ್ರೆಯಲ್ಲಿ ಇರಿಸಿ ಅಂಜನಪ್ಪ ರವರು ಅವರ ಅಣ್ಣನಿಗೆ ಪೋನ್ ಮಾಡಿ ವಿಚಾರ ತಿಳಿಸಿದರು ಹಾಗೂ ಈ ಸಂಬಂಧ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಹಾಗೂ ಸದರಿ ಟ್ರಾಕ್ಟರ್ ಅನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 11.12.2025 ರಂದು ಅಂಜನಪ್ಪ ಮತ್ತು ಮೃತ ಕೃಷ್ಣ ಮೂರ್ತಿ ಕೂಲಿ ಕೆಲಸಕ್ಕೆಂದು ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿ. ದಿಃ 12.12.2025 ರಂದು ಚಿಟ್ಟಿಕೊಡಿಗೆ ಗ್ರಾಮದಲ್ಲಿ ಮಧ್ಯಾಹ್ನ 2.30 ಸುಮಾರಿಗೆ ಆರೋಪಿಯು ಅಡಿಕೆ

ತೆಗೆದುಕೊಂಡು ಹೋಗಲು ಟ್ರಾಕ್ಟರ್ ಸಂಖ್ಯೆಃ KA 18 TB 2190 ಹಾಗೂ ಟ್ರೆಲರ್ ಸಂಖ್ಯೆಃ KA 18 TB 2196 ಮಿನಿ ಟ್ರಾಕ್ಟರ್ ಅನ್ನು ತೆಗೆದುಕೊಂಡು ಬಂದು 30 ಚೀಲ ಅಡಿಕೆಗಳನ್ನು ಲೋಡ್ ಮಾಡಿ ಸದರಿ ಟ್ರಾಕ್ಟರ್ ನ ಮೇಲೆ ಕೃಷ್ಣ ಮೂರ್ತಿ ಇವರು ಕುಳಿತುಕೊಂಡು ನಾನು ಟ್ರಾಕ್ಟರ್ ಹಿಂದುಗಡೆ ಹೋಗುತ್ತಿದ್ದು, ಸಂಜೆ 5.10 ರ ಸುಮಾರಿಗೆ ಟ್ರಾಕ್ಟರ್ ಚಾಲಕನು ರಸ್ತೆಯ ತಿರುವಿನಲ್ಲಿ ಟ್ರಾಕ್ಟರ್ ಅನ್ನು ದುಡುಕು ಮತ್ತು ನಿರ್ಲಕ್ಷತನದಿಂದ ಟ್ರಾಕ್ಟರ್ ಇಂಜಿನ್ ಅನ್ನು ಬಲಕ್ಕೆ ಚಲಾಯಿಸಿದನು ಎಂದರೆ ಸರಿಯಲ್ಲ. ಆಗ ಅಡಿಕೆ ಮೂಟೆ ಮೇಲೆ ಕುಳಿತಿದ್ದ ಕೃಷ್ಣಮೂರ್ತಿರವರ ಸೊಂಟದ ಹತ್ತಿರ ರಕ್ತ ಆಗಿದ್ದು, ಸದರಿಯವರನ್ನು ಕೊಪ್ಪ ಆಸ್ಪತ್ರೆಯಿಂದ ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿದ್ದು, ಸದರಿ ಅಪಘಾತವು ಟ್ರಾಕ್ಟರ್ ಚಾಲಕನ ದುಡುಕು ಮತ್ತು ನಿರ್ಲಕ್ಷತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಚಾಲಕನು ದುಡುಕು ಮತ್ತು ನಿರ್ಲಕ್ಷತನದಿಂದ ಕೃಷ್ಣ ಮೂರ್ತಿ ಇವರು ಕೆಳಗೆ ಬಿದ್ದು ಮೃತ ಪಟ್ಟಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ G.D.ವಕೀಲರಿಂದಃ

**1.** ಚಿಟ್ಟಿಕೊಡಿಗೆಯಿಂದ ಗುಡ್ಡೆಹಳ್ಳ ಕ್ರಾಸ್ 1 ಕಿ.ಮೀ. ದೂರದಲ್ಲಿ ಇರುತ್ತದೆ ಎಂದರೆ ಸರಿ. ಆ ದಿನ ಟ್ರಾಕ್ಟರ್ ಸುಮಾರು 4.30 ರಿಂದ 5.00 ಗಂಟೆ ಅವಧಿಯಲ್ಲಿ ಹೊರಟಿರುತ್ತದೆ. ಕೃಷ್ಣಮೂರ್ತಿ ಇವರು ಟ್ರಾಕ್ಟರ್ ನಿಂದ ಬಿದ್ದಿರುವುದನ್ನು ನಾನಾಗಲಿ ಮತ್ತು ಅಂಜನಪ್ಪ ನೋಡಿರುವುದಿಲ್ಲ ಎಂದರೆ ಸರಿ. ನಾವು ಹಿಂದಿನಿಂದ ಬೈಕ್ ನಲ್ಲಿ ಹೋಗುವ ಪೂರ್ವದಲ್ಲಿ ಆತ ಬಿದ್ದಿದ್ದ ಎಂದರೆ ಸರಿ. ಚಿಟ್ಟಿಕೊಡಿಗೆಯಿಂದ ಗುಡ್ಡೆಹಳ್ಳಿಗೆ ಹೋಗಲು 10 ರಿಂದ 15 ನಿಮಿಷ ಆಗುತ್ತದೆ ಎಂದರೆ ಸರಿ. ನಾನು ಪೋಲಿಸ್ ಠಾಣೆಗೆ ಹೋಗಿ ಯಾವುದೇ ಕೊಟ್ಟಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ